## ಪದಬಂಧ



### ಎಡದಿಂದ ಬಲಕ್ಕೆ

1. ಕಂಡಕಂಡವರಿಗೆಲ್ಲ ತೋರಿಸಲೆಂದು ತಂದದ್ದು ಈ ಸುಂದರ ಭರಣಿ 4
3. ಆ ಶಾಲೆಯ ಆವರಣ, ಎಷ್ಟು ವಿಸ್ತಾರ ಅಲ್ಲವೇ? 3
4. ನವಮಿಯ ದಿನದಂದೇ ಸಲ್ಲಿಸಬೇಕಂತೆ ಈ ಕೋರಿಕೆ 3
6. ಹರಿದ್ವಾರದ ದೂರ ತಿಳಿಸಲು ಏನೀ ಪುರಾತನ ಅಳತೆ? 4
7. ಅಸಮ್ಮತಿ ತೋರಿದ್ದೆಲ್ಲ ಒಂದೇ ಅಳತೆಯಲ್ಲಿಲ್ಲ 3
9. ಸಂಗ್ರಾಮದಿಂದ ಹಿಂದಿರುಗಿದ ಎಲ್ಲರ ಸೇರ್ಪಡೆ 3
11. ಕೊಳ್ಳುವವರು ರೇಗಿದರೆ ನೀನೂ ಸಿಟ್ಟಾಗು 3
13. ಕೇಳಿದೊಡನೆ ತವಕ ಮೂಡಿಸುವ ಕಾವ್ಯ ಭಾವ 3
15. ಬ್ಯಾಗನ್ನು ತುಂಬಿ ತಂದ ಆತ, ಕರೆಯದೇ ಬಂದವನು ತಾನೇ? 4
17. ಸಾಗರದ ಕಡೆಯಿಂದ ಎಂಥ ಹಿತಕರ ಕಂಪು! 3
18. ಐರಾವತವನ್ನೇ ಏರಬೇಕೆಂದು ಏಕಿಂಥ ಒತ್ತಾಯ? 3
19. ಮಹನೀಯರ ಕೈಕೆಲಸ, ಮನಸೆಳೆಯುವಂತೆ ಸುಂದರ 4

### ಮೇಲಿನಿಂದ ಕೆಳಕ್ಕೆ

1. ಹೊಲದ ಕೆಲಸದ ನಡುವೆಯೇ ಏನೀ ವಾಗ್ವಾದ? 3
2. ಮೂರ್ಖರಿಗೂ ತಿಳಿಯುವಂತೆಯೇ ಇದೆ, ಆಳ ಹಳ್ಳ 3
3. ಧ್ವಂಸ ಮಾಡುವುದರಲ್ಲಿ ಆತ ಪಾಂಡಿತ್ಯ ಪಡೆದವ 3
5. ಆ ಇಡೀ ಊರಿಗೇ ಹಬ್ಬಿರುವಂತಿದೆ ನಿರಾಸಕ್ತಿ 3
7. ಅಕ್ಕರೆಯಿಂದ ಉಪಚರಿಸಬೇಕೆಂದು ಭಿನ್ನಹ 3
8. ಎಲ್ಲೆಲ್ಲೂ ಉರುಳು ಸೇವೆ ಮಾಡಬೇಕೆಂಬ ಹುಚ್ಚು ಅವನಿಗೆ 2
9. ವಿಧ್ವಂಸಕ ವಸ್ತುಗಳನ್ನೆಲ್ಲ ಮುಚ್ಚಿಡಲೊಂದು ಭದ್ರ ಪೆಟ್ಟಿಗೆ 3
10. ಮರ ಹತ್ತುವ ಸಾಮರ್ಥ್ಯಕ್ಕೆ ಅಲ್ಲಿ ತುಂಬ ಪ್ರಾಮುಖ್ಯ ಇದೆ 3
12. ಸುಶಿಕ್ಷಿತರನ್ನೆಲ್ಲ ಹೇಗಾದರೂ ಕಾಪಾಡು 3
14. ಉನ್ನತ ಮಟ್ಟದಲ್ಲಿದ್ದರೂ ಆತ ತುಂಬ ವಿನಯವಂತ 3
15. ಎಲ್ಲವನ್ನೂ ಅಧ್ವಾನ ಮಾಡುವ ನೀಚ ಮನುಷ್ಯ 3
16. ವಿತ್ತವಿಲ್ಲದವರ ಕೈ ತುಂಬ ಯಾವುದೀ ಬಿಳಿ ಲೋಹ? 3

### 22–06–2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಅಸತ್ಯ 3. ಜವಾನಿ 4. ಜಿಲೇಬಿ 6. ಧನನಿಧಿ 7. ಪ್ರಾಣವಾಯು 9. ಕಿಡಿಕಾರು 11. ಪರಿಮಳ 15. ಗಡವ 16. ಬುರುಜು 17. ನಕುಲ (= ಮುಂಗುಸಿ)

**ಮೇಲಿನಿಂದ ಕೆಳಕ್ಕೆ**

1. ಅಸತ್ಯ 2. ತ್ಯಜಿಸು 3. ಜನನಿ 5. ಬಿನ್ನಾಣ 6. ಧಮಕಿ 8. ಯುಗಳ 10. ಕಾಳಗ 12. ರಿವಾಜು 13. ಪಾವನ 14. ತಂಬುಲ (=ತಾಂಬೂಲ)

**ಪ್ರಶ್ನಾಂಕಣ**

# ಕ್ಯಾಸಿಯಸ್: ಏನೇನು ವಿಕ್ರಮ?

ಕ್ಯಾಸಿಯಸ್ ಅದೊಂದು ಮೊಸಳೆ. ಉದ್ದದಲ್ಲಿ, ತೂಕದಲ್ಲಿ ಮತ್ತು ಆಯುಷ್ಯದಲ್ಲಿ ಕೂಡ ಅದಕ್ಕೆ ಸಮನಾದ ಮತ್ತೊಂದು ಮೊಸಳೆ ಪ್ರಸ್ತುತ ಜಗತ್ತಿನಲ್ಲಿ ಜೀವಂತ ಕಂಡಿಲ್ಲ. ಈ ವಿಕ್ರಮಗಳಿಂದಾಗಿಯೇ ಅದಕ್ಕೆ ವಿಶ್ವ ಶ್ರೇಷ್ಠ ಬಾಕ್ಸಿಂಗ್ ಪಟು ಮಹಮದ್ ಆಲಿಯ ಮೂಲ ಹೆಸರಾದ 'ಕ್ಯಾಸಿಯಸ್ ಕ್ಲೇ' ಅನ್ನೇ ಅನುಸರಿಸಿದ ಗೌರವದ ಅಭಿಧಾನ. ಆಸ್ಟ್ರೇಲಿಯಾದ ಗ್ರೀನ್ ಐಲ್ಯಾಂಡ್‌ನಲ್ಲಿರುವ ಮೆರೈನ್ ಲ್ಯಾಂಡ್ ಕ್ರೋಕೋಡೈಲ್ ಪಾರ್ಕ್‌ನಲ್ಲಿ ಬಂಧಿಯಾಗಿ, ಪ್ರದರ್ಶನ ಪ್ರಾಣಿಯಾಗಿ ಈ ಮೊಸಳೆಯದು ವಾಸ.

1984ರಲ್ಲಿ ಕ್ಯಾಸಿಯಸ್ ಅನ್ನು ಸೆರೆಹಿಡಿದಾಗ ಅದರದು ಅಂದಾಜು 80 ವರ್ಷ ವಯಸ್ಸು. ಈ ಮೊಸಳೆ ತಾನು ನೈಸರ್ಗಿಕವಾಗಿ ನೆಲೆಸಿದ್ದ ನದೀ ಮುಖಜದ (ಹಾಗೆಂದರೆ ನದಿಯೊಂದು ಪ್ರವಹಿಸಿ ಬಂದು ಕಡಲನ್ನು ಸೇರುವ ಸ್ಥಳ) ಆಸುಪಾಸಿನ ಪಶು ಸಾಕಣಾ ಕೇಂದ್ರಗಳಿಗೆ ಆಗಾಗ ನುಗ್ಗಿ ದನಗಳನ್ನು ಬೇಟೆಯಾಡುತ್ತಿದ್ದ ಕಾರಣ ಅದನ್ನು ಸೆರೆಹಿಡಿಯಲಾಯಿತು. ಈಗ ಕೆಲವೇ ದಿನಗಳ ಹಿಂದೆ ಈ ಮೊಸಳೆಯ ವಯಸ್ಸು 120 ವರ್ಷವನ್ನು ತಲುಪಿತು! ಪ್ರಸ್ತುತ ಬದುಕಿರುವ ಅತ್ಯಂತ ದೀರ್ಘಾಯುಷಿ ಮೊಸಳೆ ಆಗಿರುವುದಷ್ಟೇ ಅಲ್ಲದೆ ಉದ್ದ, ಶರೀರ ತೂಕ ಮತ್ತು ಗಾತ್ರಗಳಲ್ಲೂ ಕ್ಯಾಸಿಯಸ್‌ನದೇ ವಿಶ್ವದಾಖಲೆಗಳು. ಈ ಮೊಸಳೆಯ ಈಗಿನ ಉದ್ದ 18 ಅಡಿ! ಅದರ ದೇಹದ ತೂಕ 1300 ಕಿಲೋ ಗ್ರಾಂ!

ವಾಸ್ತವವಾಗಿ ಕ್ಯಾಸಿಯಸ್‌ಗಿಂತ ಹೆಚ್ಚು ಉದ್ದವೂ (20 ಅಡಿ 3 ಅಂಗುಲ), ಹೆಚ್ಚು ದೈತ್ಯವೂ ಆಗಿದ್ದ ಒಂದು ಮಹಾ ದೈತ್ಯ ಮೊಸಳೆ 'ಲೂಲಾಂಗ್' ಅನ್ನು 2012ರಲ್ಲಿ ಫಿಲಿಪ್ಪೀನ್ಸ್‌ನಲ್ಲಿ ಹಿಡಿಯಲಾಗಿತ್ತು. 2013ರಲ್ಲಿ ಲೂಲಾಂಗ್ ಮೃತವಾದ ಮೇಲೆ ಕ್ಯಾಸಿಯಸ್‌ನ ಉದ್ದ, ತೂಕ ಮತ್ತು ಆಯುಷ್ಯಗಳ ವಿಶ್ವದಾಖಲೆಗಳನ್ನು ಬೇರಾವ ಮೊಸಳೆಯೂ ಮೀರಿಲ್ಲ!




ಕ್ಯಾಸಿಯಸ್ ಕ್ಷಾರ ನೀರಿನ ಮೊಸಳೆಗಳ (Salt Water Crocodiles) ಕುಟುಂಬಕ್ಕೆ ಸೇರಿದೆ. ಈಗ್ಗೆ 112 ದಶಲಕ್ಷ ವರ್ಷಗಳ ಹಿಂದೆ ಆಗಿನ ಡೈನೋಸಾರ್‌ಗಳ ಸಮಕಾಲೀನ ಆಗಿದ್ದ, ಡೈನೋಸಾರ್‌ಗಳನ್ನೇ ಬೇಟೆಯಾಡುತ್ತಿದ್ದ ಪರಮ ದೈತ್ಯ, ಪರಮ ಶಕ್ತ ಮೊಸಳೆ ಸಾರ್ಕೋಸೂಚಸ್ ಇಂಪರೇಟರ್‌ಗಳ (ಚಿತ್ರ 1 ನೋಡಿ) ನೇರ ಸಂಬಂಧಿಯಾಗಿರುವ ಕ್ಯಾಸಿಯಸ್ ಈಗಲೂ, ಅದರ ನೂರಿಪ್ಪತ್ತು ವರ್ಷಗಳಿಗೂ ಅಧಿಕ ವಯಸ್ಸಿನಲ್ಲೂ, ತುಂಬ ಚುರುಕಾಗಿದೆ; ಇತರ ಮುದಿ ಮೊಸಳೆಗಳಂತೆ ಅದು ಶಾಂತ ಚಿತ್ತನಾಗಿಯಾಗಲೀ, ನಿರಾಸಕ್ತನಾಗಿಯಾಗಲೀ ಉಳಿದಿಲ್ಲ!

ಇದೂ ಕ್ಯಾಸಿಯಸ್‌ನದೇ ಮತ್ತೊಂದು ಅನನ್ಯ ವಿಕ್ರಮ.

■ ಎನ್. ವಾಸುದೇವ್